ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆ

### ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ : ಆಆಶಾ/ಪಿ.ಪ್ರ.ಬಾಕಿ/2015-16 ದಿನಾಂಕ : 31.10.2015

**ಸುತ್ತೋಲೆ**

ವಿಷಯ : ದಿನಾಂಕ: 31.08.2015 ಕ್ಕೆ ನಿವೃತ್ತರಾಗುವ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರು ಹಾಗೂ ಇಲಾಖಾ ನೌಕರರ ಪಿಂಚಣಿ ಕಡತಗಳನ್ನು ಬಾಕಿ ಉಳಿಸಿಕೊಂಡಿರುವ ಕುರಿತು ವಿಚಾರಣೆ ಆರಂಭಿಸುವ ಕುರಿತು ಪರಿಶೀಲನೆ.

ಉಲ್ಲೇಖ : 1) ಕೆ.ಸಿ.ಎಸ್.ಆರ್ ನಿಯಮ 323.
2) ಮಹಾಲೇಖಪಾಲರು, ಬೆಂಗಳೂರುರವರು ನೀಡಿರುವ ಪಿಂಚಣಿ ಸೌಲಭ್ಯ ಇತ್ಯರ್ಥ ಕುರಿತು ಮಾರ್ಗಸೂಚಿಗಳು.

******

1. ನಿವೃತ್ತರಾಗುವ ಪ್ರತಿಯೊಬ್ಬ ನೌಕರನ ಪಿಂಚಣಿ ಪ್ರಸ್ತಾವನೆಯನ್ನು ನಿವೃತ್ತಿ ದಿನಾಂಕಕ್ಕೆ 3 ತಿಂಗಳು ಮುಂಚಿತವಾಗಿ ಮಹಾಲೇಖಪಾಲರ ಕಛೇರಿಗೆ ಸೌಲಭ್ಯಗಳ ಇತ್ಯರ್ಥಕ್ಕಾಗಿ ಸಲ್ಲಿಸಬೇಕಾಗಿರುತ್ತದೆ. ಈ ಬಗ್ಗೆ ಪದೇ ಪದೇ ಶಿಕ್ಷಣ ಆಯುಕ್ತರ ಕಛೇರಿಯಿಂದ ಸೂಚನೆಗಳನ್ನು ನೀಡಿದರೂ ಸಹಾ ಬಿ.ಇ.ಒ ಕಛೇರಿಯಲ್ಲಿ ಅನಗತ್ಯವಾಗಿ ಪಿಂಚಣಿ ಪ್ರಸ್ತಾವನೆಗಳನ್ನು ಹಿಡಿದಿಟ್ಟುಕೊಂಡು ನಿವೃತ್ತ ನೌಕರರನ್ನು ಅಲೆದಾಡಿಸುವ ಪ್ರವೃತ್ತಿ ಇದೆ ಎಂಬ ಆಪಾದನೆ ಕೇಳಿಬರುತ್ತಿದೆ. ಈ ಆಪಾದನೆಯನ್ನು ಪರಿಶೀಲಿಸಿ ದೃಢಪಡಿಸಿಕೊಳ್ಳಬೇಕಾಗಿದೆ.

2. ನಿಮ್ಮ ಕಾರ್ಯಾಲಯದ ವ್ಯಾಪ್ತಿಗೆ ಬರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ದಿನಾಂಕ: 31.10.2015 ರಲ್ಲಿದ್ದಂತೆ ನಿವೃತ್ತರಾದ ಎಷ್ಟು ಮಂದಿ ಪ್ರಾಥಮಿಕ ಶಾಲಾ ಶಿಕ್ಷಕರು, ಪ್ರೌಢ ಶಾಲಾ ಶಿಕ್ಷಕರು, ಲಿಪಿಕ ಸಿಬ್ಬಂದಿ, ಗ್ರೂಪ್ 'ಡಿ' ಸೇರಿದಂತೆ ಎಷ್ಟು ನೌಕರರ ಪಿಂಚಣಿ ಪ್ರಸ್ತಾವನೆಯನ್ನು ಹಿಡಿದಿಟ್ಟುಕೊಳ್ಳಲಾಗಿದೆ?

3. ಈ ವಿಚಾರವನ್ನು ಆಯಾ ಬಿ.ಇ.ಒ ಹಾಗೂ ಸಂಬಂಧಪಟ್ಟ ಶೈಕ್ಷಣಿಕ ಜಿಲ್ಲೆಗಳ ಉಪನಿರ್ದೇಶಕರು ಪರಿಶೀಲಿಸಬೇಕೆಂದು ಕಟ್ಟು ನಿಟ್ಟಾಗಿ ಸೂಚಿಸಲಾಗಿದೆ.

4. ಯಾವುದೇ ದೂರು ಅರ್ಜಿ ಪಿಂಚಣಿಗೆ ಸಂಬಂಧಪಟ್ಟಂತೆ ಆಯುಕ್ತರ ಕಛೇರಿಗೆ ದಾಖಲಾದಲ್ಲಿ ಸಂಬಂಧಪಟ್ಟ ಬಿ.ಇ.ಒ ಮತ್ತು ಶೈಕ್ಷಣಿಕ ಜಿಲ್ಲೆಗಳ ಉಪನಿರ್ದೇಶಕರು ದಾಖಲೆಗಳ ಸಹಿತ ಸಂಬಂಧಪಟ್ಟ ನೌಕರನ ಜೊತೆಗೂಡಿ ಆಯುಕ್ತರ ಕಛೇರಿಗೆ ಖುದ್ದು ಹಾಜರಾಗಲು ಸೂಚಿಸಲಾಗುವುದು. ಈ ರೀತಿ ಖುದ್ದು ಹಾಜರಾಗಿ ನಿಮ್ಮ ಸ್ಪಷ್ಟೀಕರಣವನ್ನು ಸಲ್ಲಿಸುವ ಬದಲಿಗೆ ಮುಂಜಾಗ್ರತೆ ವಹಿಸಿ ನಿಮ್ಮ ಹಂತದಲ್ಲಿಯೇ ಪರಿಶೀಲಿಸಿ ಯಾವುದೇ ನಿವೃತ್ತ ನೌಕರನ ಪಿಂಚಣಿ ಪ್ರಸ್ತಾವನೆಗಳು ಸರಿಯಾದ ಕಾನೂನಾತ್ಮಕ ಕಾರಣಗಳಿಲ್ಲದೆ ಬಾಕಿ ಉಳಿಸಬಾರದೆಂದು ಮತ್ತೊಮ್ಮೆ ಸೂಚಿಸಲಾಗಿದೆ.

31/x/15
(ಕೆ.ಎಸ್.ಸತ್ಯಮೂರ್ತಿ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಇವರಿಗೆ

- ✓ ಎಲ್ಲಾ ಜಿಲ್ಲೆಯ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಸೂಕ್ತ ಕ್ರಮಕ್ಕಾಗಿ
- ✓ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಸೂಕ್ತ ಕ್ರಮಕ್ಕಾಗಿ